ಸಾಕ್ಷಿಯನ್ನು ದಿಃ**25.07.2023** ರಂದು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.

ಮುಖ್ಯ ವಿಚಾರಣೆಃ ವಾದಿ ಪರ ಶ್ರೀ.ಎನ್.ಎ.ವಕೀಲರಿಂದ:

ಸಾಕ್ಷಿ ಇಂದು ಕಟ್ಟೆಯಲ್ಲಿ ನಿಂತು ತಮ್ಮ ಮುಖ್ಯ ವಿಚಾರಣೆಯ ಭಾಗವಾಗಿ ಪ್ರಮಾಣ ಪತ್ರ ಸಲ್ಲಿಸಿರುತ್ತಾರೆ ಹಾಗೂ ಅದರಲ್ಲಿ ಬರೆದಿರುವ ಅಂಶಗಳೆಲ್ಲವೂ ಸತ್ಯವಾಗಿರುತ್ತವೆ ಹಾಗೂ ಅದರಲ್ಲಿರುವ ಸಹಿ ತನ್ನದೇ ಎಂದು ಹೇಳಿರುತ್ತಾರೆ.

ನಿಪಿ.1 ಕ್ಕೆ ನಾನು ಸಾಕ್ಷಿಯಾಗಿ ಸಹಿ ಮಾಡಿರುತ್ತೇನೆ. ಅದರಲ್ಲಿರುವ ನನ್ನ ಸಹಿಯನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ.1(ಜಿ)ಎಂದು ಗುರುತಿಸಲಾಗಿದೆ. ಸದರಿ ದಾಖಲೆಗೆ ಶಿವಕುಮಾರ, ಅಶೋಕ ಗೌಡ ಎಂಬುವವರು ಸಾಕ್ಷಿಯಾಗಿ ಸಹಿ ಹಾಕಿರುತ್ತಾರೆ. ಸದರಿ ದಾಖಲೆಗೆ ಕ್ರಯದ ಕರಾರು ಪತ್ರವನ್ನು ಬರೆದುಕೊಟ್ಟ ಕೃಷ್ಣಪ್ಪ ಮತ್ತು ಶೈಲಜಾರವರು ಸಹಿ ಮಾಡಿರುತ್ತಾರೆ. ಪತ್ರವನ್ನು ಬರೆಸಿಕೊಂಡವರು ಪ್ರಕಾಶ ಎಂಬುವವರು ಸಹಿ ಮಾಡಿರುತ್ತಾರೆ. ಅವರ ಸಹಿಯನ್ನು ನಾನು ನೋಡಿ ಗುರುತಿಸಿರುತ್ತೇನೆ. ಸದರಿ ಅವರುಗಳ ಸಹಿಯನ್ನು ನಿಪಿ.1(ಎ) ಯಿಂದ (ಸಿ) ಈಗಾಗಲೇ ಎಂದು ಗುರುತಿಸಲಾಗಿದೆ. ಸದರಿ ದಾಖಲೆಗೆ ಕೃಷ್ಣಪ್ಪ ಮತ್ತು ಶೈಲಜಾರವರ ಸಹಿಗಳನ್ನು ಎರಡು ಕಡೆ ಮಾಡಿದ್ದು, ಅವುಗಳನ್ನು ನಾನು ನೋಡಿ ಗುರುತಿಸಿರುತ್ತೇನೆ. ಸದರಿ ಕೃಷ್ಣಪ್ಪ ಮತ್ತು ಶೈಲಜಾರವರು ಮತ್ತೊಂದು ಕಡೆ ಮಾಡಿರುವ ಸಹಿಗಳನ್ನು ಈಗಾಗಲೇ ನಿಪಿ.1(ಇ) ಯಿಂದ ನಿಪಿ.1(ಎಫ್)ಎಂದು ಗುರುತಿಸಲಾಗಿದೆ. ಸದರಿ ದಾಖಲೆಯನ್ನು

ವೆಂಕಟೇಶಮೂರ್ತಿ ಎಂಬುವವರು ಬರೆದಿರುತ್ತಾರೆ.

ಪಾಟೀ ಸವಾಲಿಗಾಗಿ ವಕೀಲರು ಸಮಯ ಕೋರಿದ್ದು ಸಮಯ ನೀಡಲಾಯಿತು.

( ತೆರದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು .)

ಓ. ಹೇ.ಕೇ. ಸರಿ ಇದೆ.

ಪ್ರಧಾನ ದಿವಾಣಿ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ .
ಕುಣಿಗಲ್.